
# ಸಂಭಾಷಣೆ



■ ಎಂ.ಎಸ್.ಶ್ರೀರಾಮ್
ಕಲೆ: ಎಸ್.ವಿ. ಹೂಗಾರ್

'ಇದು ಹೇಗಾಯಿತು?"

"ಹೇಗಾಯಿತು ಅಂದರೆ? ಏನು ಹೇಳಲಿ? ಅವನು ಬಿದ್ದ. ಅಸುನೀಗಿದ. ಒಂದು ಪತ್ರವಿತ್ತು..."

"ಅಷ್ಟೇನಾ? ಅದಕ್ಕೊಂದು ಹಿನ್ನೆಲೆ, ಒಂದು ಸಂದರ್ಭ ಇಲ್ಲವಾ? ಪತ್ರಿಕೆಗಳು ಮತ್ತು ವಾಹಿನಿಗಳು ಏನೇನೋ ಕಥೆಗಳನ್ನು ಹೆಣೆದಿದ್ದಾರಲ್ಲಾ, ಅದು? ಅಷ್ಟು ನಾಟಕೀಯವಾಗಿರೋದನ್ನು ನೀನು ಐದು ಪದಗಳಲ್ಲಿ ತಣ್ಣಗೆ ವಿವರಿಸುತ್ತಿದ್ದೀಯ... ವೈ?"

"ನಿಜಕ್ಕೂ ನಿನಗೆ ವಿವರಗಳು ಬೇಕೇ ಬೇಕು ಅನ್ನುವುದಾದರೆ ನಾನು ನನ್ನ ಗಾಯವನ್ನು ಮತ್ತೆ ಬಗೆಯಬೇಕು. ಯಾಕೆ? ಅಥವಾ ಇರಲಿಬಿಡು. ಅದೂ ಒಂದು ಪ್ರಕ್ರಿಯೆಯೇ... ಚಲೋ... ಲೆಟ್ಸ್ ಸ್ಟಾರ್ಟ್... ಅಂದು ಸಂಜೆ, ಅವನು ಟೆರೇಸಿಗೆ ಸಿಗರೇಟು ಸೇದಲು ಹೋದಾಗ ನಾನು ಹೊರಬಂದೆ. ಇಲ್ಲೇ ಈ ಜಾಗದಲ್ಲೇ ಅದು ನಡೆದದ್ದು. ನಾನು ಅವನನ್ನು ಈ ವಿಚಾರದ ಬಗ್ಗೆ ಹೇಳು, ಯಾಕೆ ನನಗೆ ಮೊದಲೇ ಹೇಳಲಿಲ್ಲ ಎಂದು ಕೇಳಿದೆ. ಅದಕ್ಕವನು ಯಾವುದೇ ಸ್ಪಷ್ಟ ಜವಾಬನ್ನು ಕೊಡದೇ 'ವೀ ಆರ್ ಇನ್ ಡೀಪ್ ಟ್ರಬಲ್. ಅಷ್ಟೇ. ಯು ವಿಲ್ ಬಿ ಮೋರ್ ಅನ್–ಹ್ಯಾಪಿ ನೋಯಿಂಗ್ ಎಬೌಟ್ ಇಟ್, ಬಟ್ ವಿ ಹ್ಯಾವ್ ಲಾಸ್ಟ್ ಎವೆರಿಥಿಂಗ್... ಐ ಹ್ಯಾವ್ ಬೀನ್ ಟ್ರಾಪ್ಡ್... ಇಟ್ ಇಸ್ ನಾಟ್ ಎಬೌಟ್ ಲೂಸಿಂಗ್ ಮನಿ, ಬಟ್... ನನ್ನ ಹೆಸರೇ ಧೂಳೀಪಟ ಆಗುತ್ತೆ, ಬಟ್ ಫರ್ ಶಿವಾನಿ...' ಎನ್ನುತ್ತಾ ಬಾಲ್ಕನಿಯ ಗೋಡೆಯ ಮೇಲೆ ಕೂತ. ಅವನು ಅಲ್ಲಿ ಅನೇಕ ಬಾರಿ ಕೂತಿದ್ದನಾದರೂ ಅಂದು ಅವನು ತನ್ನ ಕಾಲನ್ನು ಆಚೆ ಬದಿಗೆ ಇಳಿಬಿಟ್ಟ. ಅದನ್ನು ಕಂಡು ನಾನು ಅವಾಕ್ಕಾದೆ."

"ನೀನು ಅಲ್ಲೇ ಇದ್ದೆಯಾ?!"

"ಅಫ್ ಕೋರ್ಸ್ ಅಲ್ಲೇ ಇದ್ದೆ. ಯಾಕೆ ಹೀಗೆ ಡೇಂಜರಸ್ ಆಗಿ ಕೂತಿದ್ದೀಯ ಅಂತ ಕೇಳಿದ್ದೂ ಹೌದು. ನಾನೇ ಅವನ ಪಕ್ಕ ಹೋಗಿ ನಿಂತೆ. ಎಂದೂ ಬಾಲ್ಕನಿಯ ಕಟ್ಟೆಗೆ ಅಷ್ಟು ಹತ್ತಿರ ನಿಂತದ್ದೇ ಇಲ್ಲ. ಅಲ್ಲಿ ನಿಂತು ಕೆಳಗೆ ನೋಡಿದಾಗ ತಲೆ ತಿರುಗಿತು. ಕಟ್ಟೆಯ ಮೇಲೆ ತುಸು ದೂರದಲ್ಲಿ ಒಂದು ಪಾರಿವಾಳ ಬಂದು ಕೂತಿತು. ಆ ಪಾರಿವಾಳದ ಗುಟುರು ಕೇಳಲಾಗದೇ ನಾನು ಅದನ್ನು ಓಡಿಸಲು ಒಮ್ಮೆ ಚಪ್ಪಾಳೆ ತಟ್ಟಿದೆ. ಅದು ಮುಕುಂದ ಸಾಗರನ ತಲೆಯ ಬಳಿಯಿಂದ ರೆಕ್ಕೆ ಬಡಿಯುತ್ತಾ ಹಾರಿತು. ಆ ಹಾರಾಟಕ್ಕೆ ಬೆಚ್ಚಿ ಬಿದ್ದು ಹದ ತಪ್ಪಿ..."

"ಹಾಗಾದರೆ ಇದೊಂದು ಅಪಘಾತ... ಎನ್ ಆಕ್ಸಿಡೆಂಟ್."

"ಹೌದು. ನಾಟ್ ಎ ಸೂಯಿಸೈಡ್. ಆತ್ಮಹತ್ಯೆಯಲ್ಲ. ಆದರೆ ಅವನು ಒಂದು ದೊಡ್ಡ ಪತ್ರವನ್ನು ಬರೆದಿಟ್ಟಿದ್ದ ಅನ್ನೋದು ನಿನಗೂ ಗೊತ್ತು. ಅವನಿಗೆ ತನ್ನ ಪ್ರಾಣ ತೆಗೆದುಕೊಳ್ಳುವ ಇರಾದೆಯಿತ್ತು ಅನ್ನುವುದನ್ನು ಆ ಪತ್ರ ನಿರೂಪಿಸಿತ್ತು. ಅದರಲ್ಲಿ ಯಾವುದೇ ಅನುಮಾನವಿರಲಿಲ್ಲ."

"ಆದರೆ ಪ್ರೆಸ್ಸಿನವರು ಅದನ್ನು ಸೂಯಿಸೈಡ್ ಅಂತಲೇ ತೀರ್ಮಾನಿಸಿದ್ದಾರೆ. ಪರಿಸ್ಥಿತಿ ಸರಿಯಿರಲಿಲ್ಲ, ಹೀಗಾಗಿ ಆತ್ಮಹತ್ಯೆ ಮಾಡಿಕೊಂಡ ಅಂತ ವಿಶ್ಲೇಷಿಸಿದ್ದಾರೆ. 'ಪರಿಸ್ಥಿತಿ'ಯ ಬಗ್ಗೆ ಟಿಪ್ಪಣಿ ಮಾಡುತ್ತಿದ್ದಾರಾದರೂ, ಸಾವಿನ ರೀತಿಯ ಬಗ್ಗೆ ಇಲ್ಲಿಯವರೆಗೆ ಚರ್ಚೆಯಿಲ್ಲ."

"ಇದು ಆತ್ಮಹತ್ಯೆ ಅನ್ನುವುದು ಒಂದು ಸಾರ್ವತ್ರಿಕ ನಂಬಿಕೆ. ಪೊಲೀಸರೂ ಇದನ್ನು ಪ್ರಶ್ನಿಸಿಲ್ಲ."

"ಒಟ್ಟಾರೆ ಇದು ನಿಜಕ್ಕೂ ಅಪಘಾತ ಅನ್ನುವ ಮಾತನ್ನು ನೀನು ನನ್ನ ಹತ್ತಿರ ಮಾತ್ರ ಹೇಳುತ್ತಿದ್ದೀಯ. ಬೇರೆ ಯಾರಿಗೂ ಈ ಬಗ್ಗೆ ಸ್ಪಷ್ಟೀಕರಣ ಕೊಟ್ಟಿಲ್ಲ."

"ಇಲ್ಲ. ನಾನು ಯಾರಿಗೂ ಹೇಳಿಲ್ಲ. ಹೇಳಬೇಕೂಂತ ಯೋಚಿಸಿದ್ದೆನೆ? ನೆನಪಿಲ್ಲ... ಆ ಪ್ರಯತ್ನವನ್ನಂತೂ ಮಾಡಲಿಲ್ಲ. ಮುಕುಂದ ಸಾಕಷ್ಟು ಹೆಸರುವಾಸಿಯಾಗಿದ್ದ. ಅವನ ಸಾವಿನ ಸುದ್ದಿ ತಕ್ಷಣಕ್ಕೇ ಹಬ್ಬಿತ್ತು. ಈಗಾಗಲೇ ಸಂಕೀರ್ಣವಾಗಿದ್ದ ಕೇಸು ಇನ್ನಷ್ಟು ಸಂಕೀರ್ಣವಾಗಬಾರದು ಎನ್ನುವ ಇರಾದೆ ಇದ್ದಿರಬಹುದು. ವಾಹಿನಿಗಳಲ್ಲಿ ಅದರ ಕಥಾನಕ ಸೆಟ್ ಆಗಿತ್ತು ಅನ್ನುವ ಕಾರಣವೂ ಇರಬಹುದು. ಆ ಕಥಾನಕದ ದಿಕ್ಕನ್ನು ನಾನು ಬದಲಾಯಿಸಲು ಪ್ರಯತ್ನಿಸಲಿಲ್ಲ."

"ಅದಕ್ಕೆ ಏನಾದರೂ ಕಾರಣಗಳಿದ್ದುವೇ? ಚರ್ಚೆಗೆ ಮಸಾಲೆ ಒದಗಿಸಿ ಹೊರಪ್ರಪಂಚ ಇನ್ನಷ್ಟು ಸಂಕೀರ್ಣವಾಗುತ್ತದೆ ಅನ್ನುವ ಕಾರಣಕ್ಕೇ ಸತ್ಯವನ್ನು ಮರೆಮಾಚಿದೆಯಾ? ಪೊಲೀಸರಿಗೂ ನೀನು ಈ ಮಾತನ್ನು ಹೇಳಿಲ್ಲ, ಅಲ್ಲವಾ?"

"ನನಗೆ ಸಾಂತ್ವನವನ್ನು ನೀಡುವ ಪ್ರಯತ್ನದ ನಿಟ್ಟಿನಲ್ಲಿ ಈ ಪ್ರಶ್ನೆಗಳನ್ನು ಕೇಳುತ್ತಿದ್ದೀಯಾ?... ಸಾರಿ. ಯು ಆರ್ ನಾಟ್ ಹೆಲ್ಪಿಂಗ್ ಮಿ."

"ಸಾರಿ. ನಿನಗೆ ಈ ಬಗ್ಗೆ ಮಾತಾಡೋದಕ್ಕೆ ಇಷ್ಟವಿಲ್ಲವಾದರೆ ಬಿಟ್ಟುಬಿಡೋಣ. ಬೇರೇನಾದರೂ ಮಾತಾಡೋಣ. ನನ್ನ ಉದ್ದೇಶ ಈ ಮಾತುಕತೆಯಿಂದ ನಿನಗೆ, ಮತ್ತು ನನಗೆ ಹೆಚ್ಚಿನ ಕ್ಲಾರಿಟಿ ಉಂಟಾಗಬೇಕು. ಪರಿಸ್ಥಿತಿ ಸ್ಪಷ್ಟವಾಗಲಿ ಅನ್ನುವುದೇ ಹೊರತು, ನಿನಗೆ ಇನ್ನಷ್ಟು ದುಃಖವನ್ನು ಕೊಡುವುದಲ್ಲ. ಇದು ಕಷ್ಟದ ಮಾತುಕತೆಯಿರಬಹುದು. ಆದರೆ ಇದು ಅವಶ್ಯವಾದ ಮಾತುಕತೆ ಅಂತ ನನಗನ್ನಿಸುತ್ತೆ. ಬಟ್ ಯೂ ಟೇಕ್ ದ ಕಾಲ್."

"ಅಫ್ ಕೋರ್ಸ್. ನೀನು ನನ್ನ ಫ್ರೆಂಡು. ನನಗೆ ಗೊತ್ತು. ಯು ಡೋಂಟ್ ವಾಂಟ್ ಟು